ಆರ್‌ಬಿಐ / 2005 –06 / 89
ಉಲ್ಲೇಖ . ಡಿಬಿಒಡಿ . ಸಂಖ್ಯೆ .ಎಎಂಎಲ್.ಬಿಸಿ 23 / 14.01.064 / 2005–06
ಆಗಸ್ಟ್ 2, 2005

ಗೆ,
ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ
ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಮಾನ್ಯರೆ

**ಪ್ರವಾಹ ಪೀಡಿತ ಜನರಿಗೆ ಖಾತೆಗಳನ್ನು ತೆರೆಯಲು ಅನುಕೂಲ ಮಾಡಿಕೊಡುವುದು**

ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ ಕುರಿತ ಮಾರ್ಗದರ್ಶಿ ಸೂಚಿಗಳು – ಅಕ್ರಮ ಹಣ ಸಕ್ರಮ ನಿರೋಧ ಮಾನಕಗಳು ಕುರಿತಂತೆ ದಿನಾಂಕ ನವೆಂಬರ್29,2004 ರಂದು ಹೊರಡಿಸಲಾಗಿರುವ ನಮ್ಮ ಸುತ್ತೋಲೆ ಡಿಬಿಒಡಿ. ಸಂಖ್ಯೆ .ಎಎಂಎಲ್.ಬಿಸಿ 58 / 14.01.001 / 2004–05 ನ್ನು ದಯವಿಟ್ಟು ನೋಡಿ. ಮೇಲಿನ ಸುತ್ತೋಲೆಯನ್ವಯ ಖಾತೆಯನ್ನು ತೆರೆಯುವಾಗ ಅನುಸರಿಸಬೇಕಾದ ಗ್ರಾಹಕ ಅಂಗೀಕಾರ ನೀತಿ ಮತ್ತು ಗ್ರಾಹಕನನ್ನು ಗುರುತಿಸುವ ಕಾರ್ಯ ವಿಧಾನವನ್ನು ರೂಪಿಸುವಂತೆ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿತ್ತು.

2. ನಿಮಗೆ ತಿಳಿದಿರುವಂತೆ, ಮಹಾರಾಷ್ಟ್ರದಲ್ಲಿ ಹಿಂದೆಂದೂ ಕಾಣದ ಪ್ರವಾಹಗಳಿಂದಾಗಿ ಭಾರಿ ಸಂಖ್ಯೆಯ ಜನರು ತೊಂದರಗೊಳಗಾಗಿದ್ದಾರೆ. . ಈ ತೊಂದರೆಗೊಳಗಾದ ಜನರಿಗೆ ರಾಜ್ಯ ಸರ್ಕಾರವು 50,000 /– ರೂಗಳಿಂದ 2.00 ಲಕ್ಷ ರೂಪಾಯಿಗಳವರೆಗಿನ ಚೆಕ್‌ಗಳನ್ನು ನೀಡಲು ವ್ಯವಸ್ಥೆ ಮಾಡುತ್ತಿದೆ. ಅವರು ಬ್ಯಾಂಕ್ ಖಾತೆಗಳನ್ನು ಹೊಂದಿರಬಹುದು ಅಥವಾ ಹೊಂದಿರದಿದ್ದರೆ ಮತ್ತು ತಕ್ಷಣವೇ ಬ್ಯಾಂಕ್ ಖಾತೆಗಳನ್ನು ತೆರೆಯಲೇಬೇಕಾಗಿದೆ ವಿಪತ್ತಿನ ದೃಷ್ಟಿಯಿಂದ ಮತ್ತು ತಕ್ಷಣದ ಪರಿಹಾರವನ್ನು ಒದಗಿಸಬೇಕಾದ ಅಗತ್ಯವಿರುವುದರಿಂದ ಅಂಥ ವ್ಯಕ್ತಿಗಳು ತ್ವರಿತವಾಗಿ ಬ್ಯಾಂಕ್ ಖಾತೆಯನ್ನು ತೆರೆಯುವುದಕ್ಕೆ ಅವರಿಗೆ ಸಾಧ್ಯ ವಾಗುವಂತೆ ಮಾಡಲು ಕನಿಷ್ಠ ವಿಧಿ ವಿಧಾನಗಳನ್ನು ಪಾಲಿಸುವಂತೆ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿದೆ. ಖಾತೆಗಳನ್ನು ,–

ಎ.ಮತ್ತೊಬ್ಬ ಖಾತೆದಾರನು ಮಾಡಿಕೊಡುವ ಪರಿಚಯದೊಂದಿಗೆ ಅಥವಾ

ಬಿ. ಮತದಾರರ ಗುರುತಿನ ಚೀಟಿ ಅಥವಾ ವಾಹನಚಾಲನಾ ಲೈಸೆನ್ಸ್, ಕಚೇರಿಯಿಂದ ಕಂಪನಿಯಿಂದ, ಶಾಲೆ ಕಾಲೇಜು ಮುಂತಾದವುಗಳಿಂದ ನೀಡಲಾದ ಗುರುತಿನ ಚೀಟಿ ಮುಂತಾದಂಥ ಗುರುತಿನ ದಾಖಲೆಗಳನ್ನು, ವಿದ್ಯುಚ್ಛಕ್ತಿ ಬಿಲ್, ಪಡಿತರ ಚೀಟಿ ಮುಂತಾದಂಥ ವಿಳಾಸ ಸೂಚಿಸುವ ದಾಖಲೆಯೊಂದಿಗೆ ಪಡೆದುಕೊಂಡು ಅಥವಾ

ಸಿ. ಮೇಲಿನ ಪ್ಯಾರಾ

2 (ಬಿ) ಯಲ್ಲಿ ಸೂಚಿಸಿರುವಂಥ ದಾಖಲೆಗಳನ್ನು ಹೊಂದಿರುವಂಥ ಇಬ್ಬರು ನೆರೆಹೊರೆಯವರಿಂದ ಪರಿಚಯ ಮಾಡಿಸಿಕೊಂಡು , ಅಥವಾ

ಡಿ. ಮೇಲಿನ ಯಾವೂವೂ ಇರದಿದ್ದರೆ, ಬ್ಯಾಂಕಿಗೆ ಮನವರಿಕೆಯಾಗುವಂತಹ ಯಾವುದೇ ಇತರ ಸಾಕ್ಷ್ಯವನ ್ನ ಪಡೆದುಕೊಂಡು – ತೆರೆಯತಕ್ಕದ್ದು.

**ತಮ್ಮ ವಿಶ್ವಾಸಿ,**
**(ಪ್ರಶಾಂತ್ ಸರಣ್)**
ಮುಖ್ಯ ಪ್ರಧಾನ ವ್ಯವಸ್ಥಾಪಕ